# ಭಾರತದ ಪುನರುಜ್ಜೀವನ : ರಾಮಕೃಷ್ಣ – ವಿವೇಕಾನಂದರ ಮಾರ್ಗ

ಸ್ವಾಮಿ ರಂಗನಾಥಾನಂದ

ನವಭಾರತದ ಭವಿಷ್ಯವನ್ನು ಕಟ್ಟುವಲ್ಲಿ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ವಿಚಾರಗಳು ಹೇಗೆ ಉಪಯುಕ್ತವಾಗಿವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದರು. ಈ ಲೇಖನ ಭಾಗವನ್ನು ಅವರ 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಗ್ರಂಥದ ೩ನೇ ಸಂಪುಟದಲ್ಲಿರುವ 'ಶಿಕ್ಷಣ ಮತ್ತು ಪಾರಂಪರಿಕ ಮೌಲ್ಯಗಳು' ಎಂಬ ಲೇಖನದಿಂದ ಆಯ್ದುಕೊಳ್ಳಲಾಗಿದೆ.

**ಪ್ರಾ**ಚೀನ ಮತ್ತು ಆಧುನಿಕ ಭಾರತೀಯ ಚರಿತ್ರೆಯಲ್ಲಿ ಯಾವುದೇ ಸಾಮಾಜಿಕ ಹಿಂಸಾತ್ಮಕ ಕ್ಷೋಭೆಯನ್ನಾಗಲೀ ರಕ್ತರಂಜಿತ ಕ್ರಾಂತಿಯನ್ನಾಗಲೀ ಕಾಣದೆ ಮೂಲಭೂತ ಮೌಲ್ಯಗಳನ್ನು ಭದ್ರವಾಗಿರಿಸಿಕೊಂಡು ಹೊಸ ಪರಿಸ್ಥಿತಿಗೆ ತಕ್ಕಂತೆ ಕ್ರಮೇಣ ಹೊಂದಾಣಿಕೆ ಉಂಟಾದದ್ದನ್ನು ನಾವು ಕಾಣುತ್ತೇವೆ. ಇದು ಸಾಮಾಜಿಕ ವಿವೇಕದ ಫಲ. ಭಾರತೀಯ ಸಾಮಾಜಿಕ ಅನುಭವವು ಏಕ ಪ್ರಕಾರದ ಉತ್ಕ್ರಾಂತಿ ಆಗಿದೆಯೇ ಹೊರತು ಕ್ರಾಂತಿಯಲ್ಲ , ಅಥವಾ ಯಾವುದೇ ಗಂಭೀರ ಸ್ವರೂಪದ ಘರ್ಷಣೆ ಇಲ್ಲವೆ ಹಿಂಸೆ ಇಲ್ಲದ ಆದರೂ ಕ್ರಾಂತಿಕಾರಿ ಸ್ವರೂಪದ ಉತ್ಕ್ರಾಂತಿಯಾಗಿದೆ. ಕೃಷ್ಣ, ಬುದ್ಧ, ಶಂಕರ ಮತ್ತು ಇನ್ನಿತರ ಸುಧಾರಕರು ಬೀರಿದ ಪ್ರಭಾವವು ಸೃಜನಾತ್ಮಕವೂ, ವಿಧಾಯಕವೂ, ಶಾಂತಿಪೂರ್ಣವೂ, ವ್ಯಾಪಕವೂ ಆಗಿದೆ. ಭಾರತವು ಅವುಗಳಿಗೆ ಸಹಜ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿ ತನ್ನ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಂಡಿತು. ಭಾರತೀಯ ಸಮಾಜವು ಎಂದೂ ಬದಲಾವಣೆ ಹೊಂದಿಲ್ಲವೆಂಬ ಭಾವನೆ ತಪ್ಪೆಂಬುದನ್ನು ಭಾರತೀಯ ಚರಿತ್ರೆಯ ಅಭ್ಯಾಸದಿಂದ ತಿಳಿದುಕೊಳ್ಳಬಹುದು. ಭಾರತವು ಧಾರ್ಮಿಕ ಕಲ್ಪನೆ ಮತ್ತು ಸ್ವರೂಪ, ಸಾಮಾಜಿಕ ಮೌಲ್ಯಗಳು ಮತ್ತು ಕ್ರಮಗಳು ಎಲ್ಲವುಗಳಲ್ಲೂ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿದೆ. ಡಾ. ಎಸ್. ರಾಧಾಕೃಷ್ಣನ್ ಹೀಗೆ ಹೇಳಿದ್ದಾರೆ : *(ರಿಲಿಜನ್ ಆಂಡ್ ಸೊಸೈಟಿ, ಪು. ೧೧೪–೧೫).*

''ಹಿಂದೂ ಶಾಸ್ತ್ರಗಳ ಮೇಲೆ ಬರೆದ ಭಾಷ್ಯಗಳನ್ನು ಅಭ್ಯಸಿಸಿದವರಿಗೆ ಅವುಗಳಲ್ಲಿ ಎಷ್ಟೊಂದು ಬದಲಾವಣೆಗಳು ಆಗುತ್ತಾ ಬಂದಿವೆ ಎಂಬುದರ ಪರಿಚಯ ಉಂಟಾಗಬಹುದು... ಸಮಾಜದ ಕಾಲಾನುವರ್ತನ ಸ್ವಭಾವವು ಹಿಂದೂ ಧರ್ಮದ ಮುಖ್ಯ ಲಕ್ಷಣ. ಸನಾತನ ಧರ್ಮವನ್ನು ಎತ್ತಿ ಹಿಡಿಯುವುದೆಂದರೆ ನಿಶ್ಚಲವಾಗಿ ನಿಲ್ಲುವುದಲ್ಲ , ಮುಖ್ಯ ತತ್ವಗಳನ್ನು ಗ್ರಹಿಸಿ ಆಧುನಿಕ ಜೀವನದಲ್ಲಿ ಅವುಗಳನ್ನು ಬಳಸುವುದೇ ಅದರ ಅರ್ಥ. ಎಲ್ಲ ನಿಜವಾದ ಬೆಳವಣಿಗೆಗಳೂ ಈ ಎಲ್ಲ ಬದಲಾವಣೆಗಳಲ್ಲಿ ಐಕ್ಯವನ್ನು ಕಾಪಾಡಿಕೊಳ್ಳುತ್ತವೆ.''

ಋಗ್ವೇದದ ದೇವತೆಗಳಾಗಲೀ ಅದರಲ್ಲಿ ಉಲ್ಲೇಖಿತವಾದ ಪೂಜಾ ವಿಧಾನಗಳಾಗಲೀ ಅಥವಾ ಋಗ್ವೇದೀಯ ಸಮಾಜವಾಗಲೀ ಋಗ್ವೇದದ ನಂತರದ ಸಾವಿರ ವರ್ಷಗಳ ಈಚೆ ಉಳಿದದ್ದು ಕಂಡುಬರುವುದಿಲ್ಲ. ಸ್ಮೃತಿಗಳು ಅನೇಕ ಇವೆ ಎಂಬುದು ಸಾಮಾಜಿಕ ಬದಲಾವಣೆಯ ಸಂಕೇತವಾಗಿದೆ. ಇಲ್ಲದಿದ್ದರೆ ಮೊದಲಿನ ಸ್ಮೃತಿಯೇ ಇಂದಿನವರೆಗೂ ಇರಬೇಕಾಗಿತ್ತು. ಆದರೆ ಶ್ರುತಿಯಿಂದ ಪ್ರತಿನಿಧಿಸಲ್ಪಟ್ಟ ಭಾರತದ ಆಧ್ಯಾತ್ಮಿಕ ಪರಂಪರೆ ಇಂದಿನವರೆಗೂ ನಡೆದುಕೊಂಡು ಬಂದಿದೆ. ಸ್ಮೃತಿಗಳ ರೂಪದಲ್ಲಿರುವ ಸಾಮಾಜಿಕ ನಿಯಮಗಳು ಬದಲಾಗುತ್ತಾ ಹೋಗುತ್ತವೆ ಎಂಬುದನ್ನು ಶ್ರೀರಾಮಕೃಷ್ಣರು, ''ಮೊಗಲ್ ನಾಣ್ಯಗಳು ಕಂಪನಿಯ ಆಡಳಿತದಲ್ಲಿ ಚಲಾವಣೆಯಲ್ಲಿ ಇರಲಾರವು'' ಎಂಬ ಒಂದೇ ಮಾತಿನಲ್ಲಿ ಸುಂದರವಾಗಿ ವಿವರಿಸಿದ್ದಾರೆ.

ಸ್ಮೃತಿಗಳು ಸ್ವತಃ ಈ ಸಾಮಾಜಿಕ ಬದಲಾವಣೆಯ ತತ್ತ್ವವನ್ನು ಮನ್ನಿಸುತ್ತವೆ. ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ: *(೧.೮೫)*

**ಅನ್ಯೇ ಕೃತಯುಗೇ ಧರ್ಮಾಃ ತ್ರೇತಾಯಾಂ ದ್ವಾಪರೇಽಪರೇ ।**
**ಅನ್ಯೇ ಕಲಿಯುಗೇ ನೃಣಾಂ ಯುಗಹ್ರಾಸಾನುರೂಪತಃ ॥**

'ಮನುಷ್ಯನಿಗೆ ಕೃತಯುಗದಲ್ಲಿ ಒಂದು ರೀತಿಯ ಧರ್ಮ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳಲ್ಲಿ ಬೇರೆ ಬೇರೆ ರೀತಿಯ ಧರ್ಮಗಳು. ಯುಗಗಳು ಬದಲಾದಂತೆ ಧರ್ಮಗಳು ಬದಲಾಗುತ್ತವೆ.'

### ಭಾರತದ ಪುನರುಜ್ಜೀವನ: ರಾಮಕೃಷ್ಣ-ವಿವೇಕಾನಂದರ ಮಾರ್ಗ

ಭಾರತೀಯ ಮತ್ತು ವಿದೇಶಿ ಚರಿತ್ರಕಾರರು ಅಜ್ಞಾನದಿಂದಲೋ, ಪೂರ್ವಾಗ್ರಹ ದೋಷದಿಂದಲೋ ಕಳೆದ

ಒಂದು ಶತಮಾನದಲ್ಲಿ ಭಾರತೀಯ ಚರಿತ್ರೆಯ ಬಗ್ಗೆ ಈ ಕೆಳಗಿನ ಅಭಿಪ್ರಾಯಗಳನ್ನು ಪ್ರಚಾರಪಡಿಸಿದ್ದಾರೆ:

೧. ಭಾರತೀಯ ಸಮಾಜವು ಜಾತಿ ಪದ್ಧತಿಯ ಕಟ್ಟು ನಿಟ್ಟಾದ ವ್ಯವಸ್ಥೆಯ ಮೇಲೆ ನಿರ್ಮಾಣವಾಗಿದೆ.

೨. ಜಾತಿ ಪದ್ಧತಿಗೆ ಹಿಂದೂ ಧರ್ಮವು ಮನ್ನಣೆಯನ್ನೂ ಪುಷ್ಟಿಯನ್ನೂ ನೀಡುತ್ತದೆ.

೩. ಇದರ ಅತಿರೇಕದ ನಿದರ್ಶನ ಅಸ್ಪೃಶ್ಯತೆ.

೪. ಹಿಂದೂಧರ್ಮವನ್ನು ನಾಶಗೊಳಿಸದೆ ಜಾತಿ ನಾಶ ವಾಗಲಾರದು.

೫. ಹಿಂದೂ ಧರ್ಮ ಮತ್ತು ಜಾತಿಗಳನ್ನು ನಾಶಮಾಡುವು ದರಿಂದಲೇ ಹೊಸ ಆಧುನಿಕ ಭಾರತ ತಲೆ ಎತ್ತಬಲ್ಲದು.

೬. ಪ್ರಜಾಸತ್ತೆ ಮತ್ತು ಜಾತಿಯುಕ್ತ ಹಿಂದೂಧರ್ಮ ಇವೆರಡೂ ಪರಸ್ಪರ ವಿರೋಧಿಗಳು.

೭. ಹಿಂದೂ ಮಹಿಳೆಯರನ್ನು ತುಳಿಯುವುದಕ್ಕೆ ಹಿಂದೂ ಧರ್ಮ ಬೆಂಬಲ ನೀಡುತ್ತದೆ.

೮. ಆಧುನಿಕ ತಾಂತ್ರಿಕ ಜ್ಞಾನ ಮತ್ತು ಕೈಗಾರಿಕಾ ತತ್ತ್ವಗಳು ಹಿಂದೂ ಧರ್ಮದ ಮರಣ ಶಾಸನಗಳಾಗಿವೆ.

೯. ಪರಸ್ಪರ ವಿರೋಧಿಗಳಾದ ಭಾರತದ ವಿವಿಧ ಧರ್ಮ ಗಳು ನಿರಂತರವಾಗಿ ಬೇರೆ ಬೇರೆಯಾಗಿ ಉಳಿಯುವುವು. ಇದರ ಜತೆಗೆ ಈ ವಿನಾಶಕಾರಕ ಜಾತಿಪದ್ಧತಿಯೂ ಸೇರಿ ಭಾರತದಲ್ಲಿ ರಾಷ್ಟ್ರೀಯ ಜಾಗೃತಿಯ ಬೆಳವಣಿಗೆಗೆ ತಡೆ ಯುಂಟಾಗಿದೆ.

ಕಳೆದ ಕೆಲ ಶತಮಾನಗಳಲ್ಲಿ ಭಾರತೀಯ ಸಮಾಜ ಮತ್ತು ಹಿಂದೂ ಧರ್ಮಗಳು ಈ ಲಕ್ಷಣಗಳನ್ನು ಕೆಲಮಟ್ಟಿಗೆ ಸ್ಫುಟ ವಾಗಿ ಪ್ರದರ್ಶಿಸಿದವೆಂಬುದು ನಿಜ. ಆದರೆ ವಿಮರ್ಶಕರು ಈ ದೋಷಗಳೇ ಭಾರತದ ವಿಚಾರದ ತಿರುಳೆಂದು ಭಾವಿಸಿದ್ದು ತಪ್ಪು. ಆದ್ದರಿಂದಲೇ ಅವರು ಈ ದೋಷಗಳ ನಿವಾರಣೆಯಾಗಿ ಭಾರತವು ಪ್ರಗತಿ ಹೊಂದಬೇಕಾದರೆ ತನ್ನ ಪರಂಪರೆಯ ಕಟ್ಟುಪಾಡುಗಳಿಂದ ಕಿತ್ತುಕೊಂಡು ಹೊರಬರಬೇಕೆಂದೂ ಪರ ಕೀಯರ ಬುದ್ಧಿಯನ್ನು ಎರವಲು ತಂದುಕೊಂಡು ತನ್ನ ಭವಿಷ್ಯ ವನ್ನು ಸಂಪೂರ್ಣವಾಗಿ ಹೊಸ ರೀತಿಯಲ್ಲಿ ರೂಪಿಸಿಕೊಳ್ಳ ಬೇಕೆಂದೂ ಪ್ರತಿಪಾದಿಸಿದರು. ಇದು ಕಳೆದ ಶತಮಾನದ ಮಧ್ಯಕಾಲದಲ್ಲಿ ಅನೇಕ ಮೂರ್ತಿಭಂಜಕ ವಿಚಾರಗಳಿಗೂ ಸ್ಮೃತಿಗಳಿಗೂ ಅವಕಾಶ ನೀಡಿತು. ಇದರ ಸ್ವಾಭಾವಿಕ ಪ್ರತಿ ಕ್ರಿಯೆಯಾಗಿ ಹೊಸದನ್ನು ವಿರೋಧಿಸುವ ಮತ್ತು ಹಳೆಯ ದಲ್ಲವನ್ನೂ ಸಮರ್ಥಿಸುವ ಒಂದು ಚಳುವಳಿ ತಲೆ ಎತ್ತಿತು. ಈ ಕ್ರಿಯೆ ಪ್ರತಿಕ್ರಿಯೆಗಳ ಘರ್ಷಣೆ ಆ ಶತಮಾನದ ಕೊನೆಯ ವರೆಗೂ ಮುಂದುವರಿಯಿತು. ಆಗ ಪುರಾತನ ಕಾಲದಿಂದಲೂ ಪರೀಕ್ಷೆಗೊಳಪಟ್ಟು ಉತ್ತೀರ್ಣವಾದ ಭಾರತೀಯ ವಿವೇಕ ಸೌಮ್ಯವಾಗಿ ಆದರೂ ಪರಿಣಾಮಕಾರಿಯಾಗಿ ಶ್ರೀರಾಮ ಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಮೂಲಕ ವ್ಯಕ್ತ ವಾಯಿತು. ಶ್ರೀರಾಮಕೃಷ್ಣರ ಜೀವನವೆಲ್ಲ ಅಧ್ಯಾತ್ಮಮಯ ವಾಗಿತ್ತು. ಅದನ್ನು ಗಾಂಧೀಜಿಯವರು ಹೀಗೆ ವರ್ಣಿಸಿದ್ದಾರೆ. *('ದಿ ಲೈಫ್ ಆಫ್ ಶ್ರೀರಾಮಕೃಷ್ಣ' ಗ್ರಂಥದ ಮುನ್ನುಡಿ.)*

''ಶ್ರೀರಾಮಕೃಷ್ಣ ಪರಮಹಂಸರ ಜೀವನವೆಂದರೆ ಪ್ರತ್ಯಕ್ಷ ಧರ್ಮಾಚರಣೆಯ ಕಥೆ. ದೇವರನ್ನು ಪ್ರತ್ಯಕ್ಷವಾಗಿ ನೋಡಲು ಅವರ ಜೀವನವು ನಮಗೆ ನೆರವಾಗುತ್ತದೆ... ಅವರು ದೇವ ತ್ವದ ಪ್ರತ್ಯಕ್ಷ ಅವತಾರವಾಗಿದ್ದರು... ಅವರ ಪ್ರೇಮಕ್ಕೆ ಭೌಗೋಳಿಕ ಅಥವಾ ಬೇರೆ ಯಾವುದೇ ಸೀಮೆಗಳಿರಲಿಲ್ಲ. ಮುಂದಿನ ಪುಟಗಳನ್ನು ಓದುವವರಿಗೆಲ್ಲಾ ಅವರ ದೈವೀ ಪ್ರೇಮವು ಸ್ಫೂರ್ತಿ ನೀಡಲಿ.''

ಶ್ರೀರಾಮಕೃಷ್ಣರು ರೂಢಿಯಲ್ಲಿರುವ ಯಾವುದೇ ಧರ್ಮ ವನ್ನು ಅಸ್ತವ್ಯಸ್ತಗೊಳಿಸಲಿಲ್ಲ. ಹೊಸ ಧರ್ಮವಾವುದನ್ನೂ ಪ್ರಾರಂಭಿಸಲಿಲ್ಲ. ಅವರು ಎಲ್ಲ ಧರ್ಮಗಳನ್ನೂ ಪ್ರೀತಿಸಿ ದರು. ಮತ್ತು ಅವೆಲ್ಲವುಗಳ ಮೂಲಕ ದೇವರನ್ನು ಕಂಡರು. ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಿತ್ತ ಮಾನವ ಜನಾಂ ಗದ ಆಧ್ಯಾತ್ಮಿಕ ಪುನರುಜೀವನದ ಸಂದೇಶವನ್ನು ಪ್ರಪಂಚದ ಮೂಲೆ ಮೂಲೆಗೂ ಒಯ್ದು ಮುಟ್ಟಿಸಿದರು. ಭಾರತದಲ್ಲಿ ಅವರಿಗೆ ಕೆಲ ಅಡ್ಡಿ ಅಡಚಣೆಗಳು ಒದಗಿದವು. ಜಾತೀಯ ಪ್ರತ್ಯೇಕವಾದ ಅಸ್ಪೃಶ್ಯತೆ ಧರ್ಮಾಂಧತೆ ಮೊದಲಾದುವು ಗಳು ಬಹಳ ಘಾತಕವಾಗಿ ಪರಿಣಮಿಸಿದವು. 'ಕೊಲಂಬೋ ಇಂದ ಆಲ್ಮೋರಕೆ' ಎಂಬ ಭಾಷಣಗಳಲ್ಲಿ ಹಾಗೂ ತಮ್ಮ ಪತ್ರಗಳಲ್ಲಿ ಅವರು ಭಾರತೀಯ ಪರಂಪರೆಯ ಸ್ಮೃತಿ ಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸಿದರಲ್ಲದೆ ಶ್ರುತಿ ಗಳಲ್ಲಿನ, ಅಂದರೆ ಉಪನಿಷತ್ತುಗಳಲ್ಲಿನ ವಿಶಾಲ ಆಧ್ಯಾತ್ಮಿಕ ಅಂಶಗಳನ್ನೂ ಐಕ್ಯತೆಯ ಶಕ್ತಿಗಳನ್ನೂ ರಾಷ್ಟ್ರದೆದುರು ಮಂಡಿಸಿ ದರು. ಶ್ರುತಿಗಳ ಶಕ್ತಿ ಮತ್ತು ವೈಭವಗಳನ್ನು ಅವರು ತಮ್ಮ ಗುರುಗಳ ಉಜ್ವಲ ಜೀವನಗಳಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದರು. ಆದ್ದರಿಂದ ಅವರು ರಾಷ್ಟ್ರೀಯ ಪರಂಪರೆಯಲ್ಲಿ ಮಲೆತು ನಿಂತ ಅಂಶಗಳನ್ನೆಲ್ಲಾ ಕಿತ್ತುಹಾಕಬೇಕೆಂದು ನಿರ್ಭೀತಿಯಿಂದ ಹೇಳಿದರು. ಭಾರತೀಯ ಆಧ್ಯಾತ್ಮಿಕ ಪರಂಪರೆಗೆ ಹಾಗೂ ಆಧುನಿಕ ಪ್ರಪಂಚದ ವೈಜ್ಞಾನಿಕ ಹಾಗೂ ಸಾಮಾಜಿಕ ಪರಂ ಪರೆಗೆ ಅನುಗುಣವಾಗುವಂತಹ ಹೊಸ ಸಮಾಜ ನಿರ್ಮಾಣಕ್ಕೆ ಕರೆಕೊಟ್ಟರು. ✱